ಕಾಣಬಹುದು. ಸಾಹಿತ್ಯದ ಅನನ್ಯತೆಯನ್ನು ಕಾಯ್ದುಕೊಂಡು ಬರುವ ನಿಟ್ಟಿನಲ್ಲಿ ನವ್ಯದ ಕಥೆಗಳು ಸಾಧಿಸಿದ ಕಲೆಗಾರಿಕೆ ಮತ್ತು ಕಾಯ್ದುಕೊಂಡ ಶ್ರೇಷ್ಠತೆಯ ಮಾನದಂಡಗಳನ್ನು ಗಮನಿಸುವಾಗ ಈ ಶತಮಾನದ ಕಥೆಗಳು ಈ ಅನನ್ಯತೆಯನ್ನು ಒಡೆದುಕೊಳ್ಳುವ ಮತ್ತು ಬೇರೊಂದು ರೀತಿಯಲ್ಲಿ ಕಟ್ಟಿಕೊಳ್ಳುವತ್ತ ಗಮನ ಹರಿಸಿವೆ.

ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಆರಂಭದ ಸಾಲುಗಳಾದ 'ಇಲ್ಲಿ ಯಾರೂ ಮುಖ್ಯರಲ್ಲ; ಯಾರೂ ಅಮುಖ್ಯರಲ್ಲ' ಎನ್ನುವ ಮಾತು ಕನ್ನಡದ ಸಂದರ್ಭದಲ್ಲಿ ಸಾಮಾಜಿಕವಾದ ಅಸ್ಮಿತೆಗಳ ಬಹುತ್ವಕ್ಕೆ ಸನ್ನೆಗೋಲಿನಂತೆ ಹೇಗೆ ಸಾಮಾಜಿಕ ನ್ಯಾಯದ ಕಷ್ಟವನ್ನೂ ಬಹುತ್ವದ ಮಹತ್ವವನ್ನೂ ಎತ್ತಿಬಿಟ್ಟಿತ್ತು ಎನ್ನುವುದನ್ನು ಗಮನಿಸಬೇಕು. ಪ್ರಜಾಪ್ರಭುತ್ವವಾದಿಯಾದ ಬಹುತ್ವದ ಪರ ನಿಲುವು ತನಗೆ ಎದುರಾಗಬಹುದಾದ ಅಪಾಯಕಾರಿ ಅಂಶಗಳನ್ನು ಪಕ್ಕಕ್ಕೆ ಸರಿಸಿ ಅಸ್ಮಿತೆಗಳ ಪ್ರತಿನಿಧೀಕರಣವನ್ನು ಪೋಷಿಸುತ್ತಿರುವಂತೆ ಕಾಣುವ ಈ ಹೊತ್ತಿನಲ್ಲಿ ಸಾಹಿತ್ಯವು ಮಾತ್ರ ಅಖಂಡವಾಗಿ, ಅನನ್ಯವಾಗಿದೆ ಎಂದು ಭಾವಿಸುವುದು ಕಷ್ಟ. ಬರಹವು ಈಸ್ಥೇಟಿಕ್ ಎನ್ನುವ ಸ್ಥಾನವನ್ನು ಕಳೆದುಕೊಂಡು ಸಾಮಾಜಿಕ ತಲ್ಲಣಗಳ ಹೊರೆ ಹೊತ್ತು ಜವಾಬ್ದಾರಿಯನ್ನು ನಿಭಾಯಿಸಬೇಕಾಗಿದೆ. ಈಗಿನ ಬರಹದಿಂದ ಸಾಮಾಜಿಕ ಬದ್ಧತೆಯ ಅಪೇಕ್ಷೆ ಹೆಚ್ಚಾಗಿದೆ (ಅದು ಕೃತಿಯಲ್ಲಿ ಇರುವುದಕ್ಕಿಂತ ಹೆಚ್ಚಿನದಾಗಿ ಬರಹಗಾರನ ಬದುಕಿನಲ್ಲಿ ಕಾಣುವ ನಿರೀಕ್ಷೆ ಎನ್ನಬಹುದು). ಪ್ರಾಯಶಃ ಬರಹಗಾರನ ನೈತಿಕತೆ ಮತ್ತು ರಾಜಕೀಯ ನಿಲುವುಗಳು ತುಂಬ ನಿರ್ಣಾಯಕವಾದ ಕಾಲವಿದು.



ಇಷ್ಟಾದರೂ ಸಾಹಿತ್ಯದ ಬಗೆಗೆ ಜನರಲ್ಲಿ ಪ್ಯಾಶನ್ ಉಳಿದಿದೆ. ನೆನಪಿನಲ್ಲಿ ಉಳಿಯಬಲ್ಲ ಅನೇಕ ಪುಸ್ತಕಗಳು ಇಂದಿಗೂ ಬರುತ್ತಲಿವೆ. ಈ ಹೊತ್ತು ಗಾಢವಾಗಿ ನೆನಪಾಗುವುದು ಕೃಷ್ಣಮೂರ್ತಿ ಹನೂರರ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಹಾಗೂ ಗೋಪಾಲಕೃಷ್ಣ ಪೈ ಅವರ 'ಸಪ್ನ ಸಾರಸ್ವತ' ಕೃತಿಗಳು. ಈ ಎರಡೂ ಯುಗದ ಸಂವೇದನೆಯನ್ನು ಹಿಡಿದಿಡುವ ಕೃತಿಗಳು. 'ಸಪ್ನ ಸಾರಸ್ವತ' ಜನಾಂಗೀಯ ವಲಸೆಯನ್ನು ಚರಿತ್ರೆಯ ಹಿನ್ನೆಲೆಯಲ್ಲಿ ಬಿಡಿಸಿಡುವ ಸಂಸ್ಕೃತಿ ಗತಿಕಥನವಾದರೆ, 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಸೈನಿಕನೊಬ್ಬನ ಕಣ್ಣಿನಿಂದ ರಾಜತ್ವದ ಮೌಲ್ಯಮಾಪನ ನಡೆಯುವ ಸಬಾಲ್ಟ್ರನ್ ಇತಿಹಾಸದ ಜನಚರಿತ್ರೆಯ ಕಥನ. ವಲಸೆ ಎನ್ನುವುದು ಇಂದು ಜಾಗತಿಕ ವಿದ್ಯಮಾನ. ಆದರೆ ಅದರ ಹಿಂದೆ ಸಾಂಸ್ಕೃತಿಕ ಕಥನಗಳೇ ಇರುತ್ತವೆ. ಕನ್ನಡದ ಕೃತಿಯೊಂದು ಪೋರ್ಚುಗೀಸರ ಕ್ರೌರ್ಯದಿಂದ ಊರುಬಿಟ್ಟು ವಲಸೆ ಬಂದ ವಲಸಿಗರ ಬದುಕನ್ನು ಒಳಗೊಂಡಿರುವುದು ವಸ್ತುವಿನ ದೃಷ್ಟಿಯಿಂದ ನಾವೀನ್ಯತೆಯನ್ನು ಸಾಧಿಸುತ್ತದೆ. ಹಾಗೆಯೇ 'ಅಜ್ಞಾತನೊಬ್ಬನ ಆತ್ಮಚರಿತ್ರೆ' ಯುದ್ಧ ಮತ್ತು ಪ್ರಭುತ್ವದ ಹಿಂಸೆಗಳನ್ನು ಜನರ ನೆಲೆಯಿಂದ ನೋಡುವ ಮೂಲಕ ಒಂದು ಸಾರ್ವತ್ರಿಕವಾದ ಮಾನವತಾವಾದವನ್ನು ಎತ್ತಿಹಿಡಿಯುತ್ತದೆ. ಈ ಕೃತಿಗಳು ಕೇಂದ್ರಗಳನ್ನು ಬದಲಾಯಿಸಿಕೊಳ್ಳುವ ಮೂಲಕ 'ಇಲ್ಲಿ ಯಾರೂ ಅಮುಖ್ಯರಲ್ಲ' ಎನ್ನುವ ಮಾತನ್ನು ಪುನಾ ಬೆಂಬಲಿಸಿವೆ.


**ಆರ್. ತಾರಿಣಿ ಶುಭದಾಯಿನಿ**

ಹೊಸ ತಲೆಮಾರಿನ ವಿಮರ್ಶಕಿ. ಚಿತ್ರದುರ್ಗದಲ್ಲಿ ನೆಲೆಸಿರುವ ಅವರು ವೃತ್ತಿಯಿಂದ ಇಂಗ್ಲಿಷ್ ಸಹ ಪ್ರಾಧ್ಯಾಪಕಿ. ಕವಿತೆ ಮತ್ತು ವಿಮರ್ಶೆಗಳಲ್ಲಿ ಆಸಕ್ತಿ. ನಾಡಿನ ಮತ್ತು ಹೊರನಾಡಿನ ಅನೇಕ ವಿಚಾರ ಗೋಷ್ಠಿ, ಕವಿಗೋಷ್ಠಿಗಳಲ್ಲಿ ಭಾಗವಹಿಸಿದ ಅನುಭವ. ಇದುವರೆಗೆ ನಾಲ್ಕು ಕವಿತಾ ಸಂಕಲನ, ನಾಲ್ಕು ವಿಮರ್ಶಾ ಸಂಕಲನಗಳು ಪ್ರಕಟವಾಗಿವೆ.